**ಸಾಕ್ಷಿಯನ್ನು ದಿಃ 12.02.2025 ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಅರ್ಜಿಯ ಮೇಲಿನ ಆದೇಶದಂತೆ ಮುಂದುವರೆದ ಪಾಟೀಸವಾಲು ಆರೋಪಿ ಪರ ಶ್ರೀ ಎಸ್.ಎಸ್.ಜಿ ವಕೀಲರಿಂದ**

ನಾನು ನನ್ನ ದೂರಿನಲ್ಲಿ ಕಾಣಿಸಿದ ನನ್ನ ವಿಳಾಸ ಸರಿಯಾಗಿದೆ ಹಾಗೂ ನನ್ನ ಹೆಸರು ಕೂಡ ಸರಿ ಇದೆ. ನಾನು ಹಾಜರುಪಡಿಸಿದ ನಿಪಿ-8 ರ ಪಹಣಿ ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ನಿಪಿ-8 ರ ಪಹಣಿ ಸೀನಾಶೆಟ್ಟಿ @ ಶ್ರೀನಿವಾಸ ಶೆಟ್ಟಿ ಎಂಬ ಎರಡು ಹೆಸರು ಇರುವ ಪಹಣಿ ಎಂದರೆ ಸರಿ. ನನ್ನ ದೂರಿನಲ್ಲಾಗಲಿ, ಈ ಪ್ರಕರಣದ ಯಾವುದೇ ದಾಖಲೆಗಳಲ್ಲಾಗಲಿ ನನಗೆ ಎರಡು ಹೆಸರು ಇದೆ ಎಲ್ಲಿಯೂ ಹೇಳಿಲ್ಲ ಎಂದರೆ ಸರಿ. ನಿಪಿ-10 ರಲ್ಲಿಯೂ ಸಹ ಎರಡು ಹೆಸರು ಇದೆ ಎಂದರೆ ಸರಿ. ನಿಪಿ-8 ಮತ್ತು 10 ರ ದಾಖಲೆಗಳು ನನಗೆ ಸೇರಿದ್ದಲ್ಲ ಎಂದರೆ ಸರಿಯಲ್ಲ. ಈ ಹಿಂದೆ ಪಾಟೀಸವಾಲಿನಲ್ಲಿ ನನಗೆ ಯಾವುದೇ ಆಸ್ತಿ ಇಲ್ಲ ಎಂದು ಹೇಳಿದ್ದರಿಂದ ಅದನ್ನು ಪುಷ್ಟಿಕರಿಸುವ ಸಲುವಾಗ ಬೇರೆಯವರ ಹೆಸರಿನ ಪಹಣಿಯನ್ನು ತಂದು ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ನಾನು ಸಹಿಯನ್ನು ಸೀನಶೆಟ್ಟಿ @ ಶ್ರೀನಿವಾಸ ಶೆಟ್ಟಿ ಎಂದು ಎಲ್ಲಿಯೂ ಮಾಡುವುದಿಲ್ಲ ಎಂದರೆ ಸರಿ. ನಾನು ನಿವೃತ್ತ ಸರ್ಕಾರಿ ನೌಕರ ಎಂದರೆ ಸರಿ. ನನ್ನ ಎಲ್ಲಾ ಸೇವಾ ದಾಖಲೆಗಳಲ್ಲಿ ನನ್ನ ಹೆಸರು ಕೇವಲ ಸೀನಶೆಟ್ಟಿ ಎಂದು ಇದೆ ಎಂದರೆ ಸರಿ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.